ಮೈಸೂರು ಡಿಸ್ಟ್ರಿಕ್ಟ್.

1909ನೆ ಇಸವಿ ಸೆಪ್ಟೆಂಬರ್ ಮಾಹೆ 25ನೆ ತಾರೀಖು ಶನಿವಾರ ಪ್ರಾತಃಕಾಲ 7—30 ಘಂಟೆಯಲ್ಲಿ ರಂಗಾಚಾರ್ಲು ಯವರ ಮೆಮೋರಿಯಲ್ ಹಾಲಿನಲ್ಲಿ ನಡೆದ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳ ಆರ್ಡಿನೆರಿ ಮೀಟಿಂಗಿನ ಪ್ರೊಸೀಡಿಂಗ್ಸು.

ಹಾಜರು.

1. ಮಿ|| ಕೆ. ಚಾಂಡಿ ಸಾಹೇಬರವರು, (ಪ್ರೆಸಿಡೆಂಟ್).
2. ,, ಎಂ. ಜೆ. ಕೃಷ್ಣಸ್ವಾಮಿರಾಯರವರು, (ವೈಸ್ ಪ್ರೆಸಿಡೆಂಟ್).
3. ,, ಎಂ. ವೆಂಕಟಕೃಷ್ಣಯ್ಯನವರು.
4. ,, ಡಾಕ್ಟರ್ ವಿ ಎಲ್. ಮಾಂಕರ್‌ರವರು, (ಹೆಲ್ತ್ ಆಫಿಸರ್).
5. ,, ಸೈಯದ್ ಯಾಕೂಬ್ ಸಾಹೇಬರವರು, (ಅಮಲ್ದಾರ್).
6. ,, ಬಿ. ವೆಂಕಟಾಚಾರ್ಯರವರು.
7. ,, ಅಂಬಳಿ ಅಣಯ್ಯಪಂಡಿತರವರು.
8. ,, ಎಸ್. ಶ್ರೀಕಂಠಯ್ಯನವರು.
9. ,, ಎಂ. ನರಸುಬ್ಬಸ್ವಾಮಿಗಳವರು.
10. ,, ಜಹಗೀರ್‌ದಾರ್ ಮಾದಪ್ಪನವರು.
11. ,, ತಿರುವೆಂಗಡ ಮೊದಲಿಯಾರ್‌ರವರು.
12. ,, ಸೈಫ್ ಮೊಹದೀ ಸಾಹೇಬರವರು.
13. ,, ಅನಂತರಾಜಯ್ಯನವರು.
14. ,, ಎಂ. ಸಿ. ರಂಗಯ್ಯಂಗಾರ್‌ರವರು.
15. ,, ಎ. ಸುಬ್ಬಣ್ಣನವರು.
16. ,, ಮಾದಪ್ಪನವರು
17. ,, ಹಸೇನಲ್ಲಿಬೇಗ್ ಸಾಹೇಬರವರು.
18. ರೆವರೆಂಡ್ ಎಚ್. ಗಲಿಫರ್ಡ್ ಸಾಹೇಬರವರು.

ಗೈರ್ ಹಾಜರು.

1. ಮಿ|| ಆರ್. ವಿ. ಸುಂದರಯ್ಯಂಗಾರ್‌ರವರು, (ಎಗ್ಜಿಕ್ಯೂಟಿವ್ ಇಂಜನಿಯರ್).
2. ,, ರಹಿಮತ್ತುಲ್ಲಾ ಅಹಮ್ಮದ್‌ಸೇಟ್‌ರವರು.

I. 1909ನೆ ಇಸವಿ ಆಗಸ್ಟು ಮಾಹೆಯ ಜನರಲ್ ಖರ್ಚು ಲೆಖ್ಖ ಆಡಿಟರವರ ರಿಪೋರ್ಟು ಮತ್ತು ಇತರ ಜನನ ಮರಣ ವಗೈರೆ ಲೆಖ್ಖಗಳು.

ವ್ಯಾಸು ಮಾಡಿದೆ.

II. ಮ್ಯಾನೇಜಿಂಗ್ ಕಮಿಟಿ ಪ್ರೊಸೀಡಿಂಗ್ಸು.

ಖಾಯಂ ಮಾಡಿದೆ.

III. ತಮ್ಮ ಮನೆಗಳ ಮುಂದ ಇರುವ ಖಾಲೀ ಜಾಗಗಳಿಗೆ ಕೌನ್ಸಿಲ್ಲಿನವರು ವಿಧಾಯಕ ಮಾಡುವ ಟೈಪ್ ಪ್ಲ್ಯಾನ್ ಪ್ರಕಾರ ಕಾಪೌಂಡು ಗೋಡೆ ಹಾಕಿಕೊಳ್ಳುವದಕ್ಕೆ ಅಪ್ಪಣೆ ಬೇಡಿ ಮೈಸೂರು ಲಕ್ಷ್ಮೀವಿಲಾಸ ಅಗ್ರಹಾರದ ನಿವಾಸಿಗಳು ಬರೆದು ಕೊಂಡಿರುವ ಅಪ್ಲಿಕೇಷನ್.

ಕೋರಿಕೆಯನ್ನು ಸದ್ಯದಲ್ಲಿ ನೆರವೇರಿಸಲು ಆಗಲಾರದು.

IV. ಈಗಿನ ಪಹರ್ ವಾಟರ್ ಸಪ್ಲೈ ಸ್ಥಿತಿ ವಿಷಯವಾಗಿ ಮಿ|| ಪಲ್ಲು ಸಾಹೇಬರವರ 16—7—1909ನೆ ಮರುಂ ವೆಮೋರಾಂಡಂ ಕಾಪಿ ಮತ್ತು ಟ್ರಸ್ಟ್ಸು ಬೋರ್ಡು ರಿಜಲ್ಯೂಷನ್ ಕಾಪಿನಿಸಿ ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ಸು ಬೋರ್ಡು ಛೇರ್ಮನ್‌ರವರಿಂದ ತಲಪಿರುವ 8—9—1909ನೆ ಮಕ್ಕುಂ 770ನೆ ನಂಬರ್ ಡಾಕೆಟ್.

ರಿಕಾರ್ಡು ಮಾಡಿದೆ. ಒಂದು ಕಾಪಿಯನ್ನು ಚೀಫ್ ಇಂಜನಿಯರವರಿಗೆ ಕಳುಹಿಸಬೇಕು. ನೀರಿನ ಸರಬರಾಯಿ ವಿಷಯದಲ್ಲಿ ಕಮಿಟಿಯವರು ಚರ್ಚಿಸಿ ತೀರ್ಮಾನಿಸುವದನ್ನು ಕೌನ್ಸಿಲ್ಲಿನವರು ಒಪ್ಪುತ್ತಾರೆ.

V. ಮ್ಯುನಿಸಿಪಲ್ ಕೌನ್ಸಿಲ್ಲಿನ ನಗದೀಯಾತು ಬಾಬು ಅಭಿವೃದ್ಧಿ ಮಾಡುವದಕ್ಕೋಸ್ಕರ ಪಹರಿನಲ್ಲಿ ದೀಪದ ಕಂದಾಯವನ್ನು ಹಾಕಬೇಕೆಂದು ಮೈಸೂರು ಗೌರ್ನಮೆಂಟ್ ರೆವಿನ್ಯೂ ಮತ್ತು ಜನರಲ್ ಡಿಪಾರ್ಟುಮೆಂಟುಗಳ ಸೆಕ್ರಿಟೆರಿಯವರಿಂದ ತಲಪಿರುವ 12—8—1909ನೆ ಮಕ್ಕುಂ 1604—ಮ್ಯೂ. 369-08-5ನೆ ನಂಬರ್ ಲೆಟರ್.

ಈ ಪಹರಿಗೆ ದೀಪದ ಕಂದಾಯ ಹಾಕತಕ್ಕದ್ದು ಅವಶ್ಯಕವೆಂದು ಕೌನ್ಸಿಲ್ಲಿನವರು ಅಂಗೀಕರಿಸುತ್ತಾರೆ. ಮ್ಯಾನೇಜಿಂಗ್ ಕಮಿಟಿಯವರು ಯಾವ್ಯಾವ ಸ್ಥಳದಲ್ಲಿ ಹೊಸದಾಗಿ ದೀಪಗಳನ್ನು ಇಡತಕ್ಕದ್ದೆಂಬುವದನ್ನು ನಿರ್ದೇಶ ಮಾಡಿ ರಿಪೋರ್ಟು ಮಾಡಬೇಕು.

VI. ಪಹರಿನಲ್ಲಿ ತಾವು ನಡೆಸಬೇಕೆಂದು ಉದ್ದೇಶಿಸಿರುವ ಸಿಗರೆಟ್ಟುಗಳ ಕೈಗಾರಿಕೆ ಕೆಲಸದ ಪ್ರೋತ್ಸಾಹಕ್ಕಾಗಿ ಹೊಗೇ ಸೊಪ್ಪಿನ ಮೇಲೆ ಸಾಯರ್ ಹಾಸಲನ್ನು ಮಾಫಿ ಮಾಡಿಸಿಕೊಡಬೇಕೆಂದು ಮಿ|| ಛಸ್ ಪಿ.-ಎಂ. ವಾರ್ಟಿ ಸಾಹೇಬರವರು ಬರೆದು ಕೊಂಡಿರುವ ಅಪ್ಲಿಕೇಷನ್.

ಸ್ಪೆಷಲ್ಲಾಗಿ ರಿಯಾಯಿತಿಯನ್ನು ತೋರಿಸಲು ಆಗಲಾರದೆಂದು ಕೌನ್ಸಿಲ್ಲಿನವರು ವಿಷಾದಪಡುತ್ತಾರೆ.

VII. 1908—09ನೆ ಸಾಲಿನ ಡ್ರಾಫ್ಟ್ ಅಡ್ಮಿನಿಸ್ಟ್ರೇಷನ್ ರಿಪೋರ್ಟು.

ಅಂಗೀಕರಿಸಿದೆ.

VIII. ಪಹರಿನಲ್ಲಿ ಹೌಸ್ ಸರವಿಸ್ ಕನೆಕ್ಷನ್‌ಗಳಿಗೆ ಮೀಟರ್ ಹಾಕುವದರಲ್ಲಿಯೂ ಮತ್ತು ಜಾಸ್ತಿಯಾಗಿ ಖರ್ಚಾಗತಕ್ಕ ನೀರಿನ ಛಾರ್ಜು ವಸೂಲು ಮಾಡುವದರಲ್ಲಿಯೂ ಸಹ ಡಿ. ಪಿ. ಡಬ್ಲ್ಯೂ. ಡಿಪಾರ್ಟುಮೆಂಟಿನವರ ಸಂಗಡ ಸೇರಿ ಆವರಿಗೆ ಸಹಾಯ ಮಾಡಬೇಕೆಂದು ಮೈಸೂರು ಗೌರ್ನಮೆಂಟ್ ರವಿನ್ಯೂ ಮತ್ತು ಜನರಲ್ ಡಿಪಾರ್ಟುಮೆಂಟುಗಳ ಸೆಕ್ರಿಟೆರಿಯವರಿಂದ ತಲಪಿರುವ 14—9—1909ನೆ ಮಕ್ಕುಂ 2559—ಮ್ಯೂ. 78-08-6ನೆ ನಂಬರು ಲೆಟರು.

ರಿಕಾರ್ಡು ಮಾಡಿದೆ. ಚೀಫ್ ಇಂಜನಿಯರವರೊಡನೆ ಸೇರಿ ಮಾಡತಕ್ಕ ಕಮಿಟಿ ಮೀಟಿಂಗಿನವರು ಈ ವಿಷಯವನ್ನು ವ್ಯವಸ್ಥೆ ಮಾಡತಕ್ಕದ್ದು.

IX. 3 ತಿಂಗಳು ಪರಿಯಂತರ ಹಾಲಿ ಇರುವ ಡಿಸ್ಪೆನ್ಸರಿ ಸಿಬ್ಬಂದಿಜೊತೆಗೆ ಮಾಹೆಯಾನಾ 73 ರೂಪಾಯಿನ ಜಾಸ್ತಿ ಸಿಬ್ಬಂದಿಯನ್ನು ಮಂಜೂರ್ಮಾಡಿರುವದಾಗಿಯೂ ಜಾಸ್ತಿ ಖರ್ಚನ್ನು ಪ್ಲೇಗ್ ಮತ್ತು ಮ್ಯುನಿಸಿಪಲ್ ಫಂಡ್ಗುಗಳಿಗೆ ಸಮವಾಗಿ ಚಾರ್ಜ್ ಮಾಡತಕ್ಕ ವಿಷಯದಲ್ಲಿ ಕೌನ್ಸಿಲ್ಲಿನವರ ರಿಜಲ್ಯೂಷನ್ ಕಳುಹಿಸಬೇಕೆಂದು ಗವರ್ನಮೆಂಟಿನಿಂದ ಸಾದರಾಗಿರುವ 15—9—1909ನೆ ಮುಕ್ತಂ 2639-4—ಸ್ಯಾನಿಟರಿ. 62-09ನೆ ನಂಬರು ಪ್ರೊಸೀಡಿಂಗ್ಸು.

ರಿಕಾರ್ಡು ಮಾಡಿದೆ. ಈ ಚಾರ್ಜಿನ ಒಂದು ಭಾಗವನ್ನು ಕೌನ್ಸಿಲ್ಲಿನವರು ಒಪ್ಪಿದಾರೆ.

X. ಪಟ್ಟಣದಲ್ಲಿ ಲೈಸೆನ್ಸು ಕೊಡತಕ್ಕ ವಿಷಯದಲ್ಲಿ ತಮಗೆ ಕೊಟ್ಟಿರುವ ಅಧಿಕಾರಗಳ ವಿಚಾರವನ್ನು ಪುನರಾಲೋಚನೆ ಮಾಡಬೇಕೆಂದು ಹೆಲ್ತ್ ಆಫೀಸರವರಿಂದ ತಲಪಿರುವ 13—9—1909ನೆ ಮುಕ್ತಂ 493ನೆ ನಂಬರು ಡಾಕೆಟ್ ಮತ್ತು ನಡವಳಿಕೆ.

ಹೆಲ್ತ್ ಮತ್ತು ಮ್ಯಾನೇಜಿಂಗ್ ಕಮಿಟಿ ಮೆಂಬರುಗಳು ಸೇರಿ ಈ ವಿಷಯದಲ್ಲಿ ತಮ್ಮ ಸಲಹೆಗಳನ್ನು ಕೌನ್ಸಿಲ್ಲಿಗೆ ತರಬೇಕು.

XI. ರಾವಲ್ಪಿಂಡಿ ಫ್ರಾಂಟಿಯರ್ಟ್ ಮತ್ತು ಕಛ್ಚಿಣದ ಕೆಲಸದ ಕಂಪನಿಯವರು ತಯಾರುಮಾಡಿರುವ ಇಲಿ ಬೋನುಗಳು 200ರನ್ನು ಪಟ್ಟಣದಲ್ಲಿ ಇಲಿಗಳನ್ನು ನಾಶಪಡಿಸುವದಕ್ಕೋಸ್ಕರ ಕೊಂಡುಕೊಳ್ಳಲು ಅಪ್ಪಣೆಯಾಗಬೇಕೆಂದು ಹೆಲ್ತ್ ಆಫೀಸರವರಿಂದ ತಲಪಿರುವ 15—9—1909ನೆ ಮುಕ್ತಂ 506ನೆ ನಂಬರ್ ಡಾಕೆಟ್.

ಒಂದು ಡಜ್ಜ ಬೋನುಗಳನ್ನು ಕ್ರಯಕ್ಕೆ ತೆಗೆದುಕೊಂಡು ಅಜಮಾಯಿಷಿ ಮಾಡಬೇಕು.

XII. ಡಿಪಾರ್ಟುಮೆಂಟಿನಲ್ಲಿ 3 ಮತ್ತು 10 ವರ್ಷಗಳು ಸರ್ವಿಸ್ ಮಾಡಿರುವ ಕ್ಲಾರ್ಕ್ ಬಸಪ್ಪ ಮತ್ತು ಈಶ್ವರರಾಯರನ್ನು ಅವರ ಕೆಲಸದಲ್ಲಿ ಖಾಯಂಮಾಡಿ ಖಾಯಂ ಎಸ್ಟಾಬ್ಲಿಷ್‌ಮೆಂಟಿಗೆ ತರಲು ಅಪ್ಪಣೆಯಾಗಬೇಕೆಂದು ಹೆಲ್ತ್ ಆಫೀಸರವರಿಂದ ತಲಪಿರುವ 15—9—1909ನೆ ಮುಕ್ತಂ 596ನೆ ನಂಬರ್ ಡಾಕೆಟ್.

ಮುಂದಿನ ವಿಾಟಿಂಗಿಗೆ ಅಜ್ಜರ್ಡ್ ಮಾಡಿ ಇದೆ.

XIII. 48ನೆ ಸೆಕ್ಷನ್ 1ನೆ ಕ್ಲಾಜ್ ಜೆ. ಪ್ರಕರಣದಲ್ಲಿ ವಿಧಿಸಿರುವ ಪ್ರಕಾರ ಮ್ಯುನಿಸಿಪಲ್ ತೆರಿಗೆ ವಿಚಾರದಲ್ಲಿ ತಯಾರಾಗಿರುವ ಡ್ರಾಫ್ಟ್ ಬೈಲಾ.

ಓದಿ ಪ್ಯಾಸ್ ಮಾಡಿದೆ.

XIV. 46ನೆ ಸೆಕ್ಷನ್ ಐ. ಮತ್ತು ಜೆ. ಕ್ಲಾಜುಗಳ ಪ್ರಕಾರ ತೆರಿಗೆ ದಾಖಲಾತಿ ಮತ್ತು ವಸೂಲಾತಿ ವಿಷಯದಲ್ಲಿ ತಯಾರಾಗಿರುವ ಬೈಲಾಗಳು.

ಓದಿ ಪ್ಯಾಸ್‌ಮಾಡಿದೆ.

XV. 48ನೆ ಸೆಕ್ಷನ್ 1ನೆ ಕ್ಲಾಜ್ ಕೆ. ಪ್ರಕರಣದ ಪ್ರಕಾರ ಸಾಯರು ಹಾಸಲು ವಸೂಲಿ ವಿಷಯದಲ್ಲಿ ತಯಾರಾಗಿರುವ ಬೈಲಾಗಳು.

ಓದಿ ಪ್ಯಾಸ್ ಮಾಡಿದೆ.

ಜೆ. ಚಾಂಡಿ, ಪ್ರೆಸಿಡೆಂಟ್.

ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ಲರವರ ಆಫೀಸಿಗೆ.

ತಾರೀಖು 22ನೆ ಸೆಪ್ಟಂಬರ್ 1909.

ಆಡಿಟರ ರಿಪೋರ್ಟು—

ಈ ತಿಂಗಳು 20ನೆ ತಾರೀಖಿನಲ್ಲಿ ಆಗಸ್ಟು ಮಾಹೆಯ ಮ್ಯುನಿಸಿಪಲ್ ಲೆಕ್ಕಗಳು ಪೊವಜೆರುಗಳು ಸಹ ಆಡಿಟ್ ಮಾಡಲಾಯಿತು.

1. 1908ನೆ ಸಾಲ್ ಆಗಸ್ಟು ಮಾಹೆಯ ಮೊಹತರ್ಫಾ ವಸೂಲಿ ರೂ. 1,883—1—6, 1909ನೆ ಸಾಲ್ ಆಗಸ್ಟು ಮಾಹೆಯಲ್ಲಿ ಮೊಹತರ್ಫಾ ವಸೂಲಿ ರೂ. 1,441—13—9, ಈ ಸಾಲಿನಲ್ಲಿ ರೂ. 441—3—9 ಪೈ ಕಮ್ಮಿಯಾಗಿರುತ್ತೆ. ವಸೂಲಾತಿಗೆ ಸಾಕಷ್ಟು ಹೆಚ್ಚಾದಷ್ಟಾಗೆಲ್ಲಾ ವಸೂಲಾತಿ ಕೆಲಸ ಕಮ್ಮಿಯಾಗುತ್ತಾ ಬರುತ್ತಿದೆ. ಮತ್ತು ಕಲೆಕ್ಟರು ವಸೂಲಾತಿಗೆ ಮೊಹಲ್ಲಾವಾರ್ ರೂಬರೂಬ್ ಹೋಗಿ ವಸೂಲಾತಿ ಕ್ರಮ ಜರಿಗಿಸುತ್ತಾ ಬಂದಿದ್ದರೆ ಇಷ್ಟು ವ್ಯತ್ಯಾಸಕ್ಕೆ ಕಾರಣವಾಗುತ್ತಿರಲಿಲ್ಲ.

ಮತ್ತು ಮೊಹಲ್ಲಾವಾರ್ ವರ್ಷವರ್ಷ ಹೆಚ್ಚಾಗಿ ರಿವಿಾರ್ಷ ವಗೈರೆ ಆಗುವದಕ್ಕೆ ವಸೂಲಿ ಮುತ್ಸದ್ದಿಯವರು ಬಹು ಕಾಲ ಬಂದೇ ಮೊಹಲ್ಲಾದಲ್ಲಿ ಇದ ದ್ದೇ ಆದರೆ ರಿವಿಾರ್ಷ ಮಾಡುವದಕ್ಕೆ ಅವಕಾಶವಾಗುತ್ತೆ. ಈ ವಿಷಯದಲ್ಲಿ ತಕ್ಕ ಏರ್ಪಾಡು ಮಾಡಿಸುವದು ಅವಶ್ಯಕವೆಂದು ತೋರುತ್ತೆ. ಮತ್ತು ಕೆಲವ್ರಕಡೆ ಮುತ್ಸದ್ದಿ ಏರ್ಪಾಡು ಸರಿಯಾಗಿ ಮಾಡಿರುವದ್ದರಿಂದ ರಿವಿಾರ್ಷ ಕಡಮೆಯಾಗಿರುತ್ತೆ.

2. ನಜರ್‌ಬಾದು ಮತ್ತು ಚಾಮರಾಜ ಈ ಎರಡು ಮೊಹಲ್ಲಾಗಳಲ್ಲಿ ಸೆಸ್ಸು ಹೆಲ್ತ್ ಆಫೀಸರವರು 11—4—0 ರೂಪಾಯಿ ಮಾತ್ರಾ ವಸೂಲ್ ಮಾಡಿರುತ್ತಾರೆ. ಇದು ನೋಡಿದರೆ ವಸೂಲಾತಿ ಕ್ರಮ ತೃಪ್ತಿಕರವಾಗಿಲ್ಲ.

3. ಕಳೆದ ವಿಾಟಿಂಗಿನಲ್ಲಿ ಹಾರ್ಸು ವಗೈರೆ ಅಲೋಯೆನ್ಸ್ ವಿಷಯ ಚರ್ಚೆ ನಡೆದು ಅದ್ಯಾಪು ಸರಿಯಾದ ಏರ್ಪಾಡು ನಡೆಯದೆ ಅಲೋಯೆನ್ಸ್ ಪಾವತಿಯಾಗಿರುವಹಾಗೆ ತೋರುತ್ತೆ. ಈ ಮೇರೆ ಮಾಡತಕ್ಕದ್ದು ರೂಲಿಗೆ ವ್ಯತ್ಯಾಸವಾಗಿದೆ.

4. ವಸೂಲಿ ಮುತ್ಸದ್ದಿಗಳಿಗೆ ವಸೂಲಾತಿಗೋಸ್ಕರ ಕೊಟ್ಟಿದ್ದ ಜವಾನರುಗಳು ಸರಿಯಾಗಿ ವಸೂಲಾತಿಗೆ ಕುಮ್ಮಕ್ಕು ಮಾಡುವಹಾಗೆ ತೋರಿಬರುವದಿಲ್ಲ.

5. ಆಕ್ಟ್ರಾಯಿ ವಸೂಲಾತಿ ವಿಷಯದಲ್ಲಿ ಎಲ್ಲಾ ಉಕ್ತಡಗಳಲ್ಲಿಯೂ ಬಾರಾಮೂರ್ಗದ ಜವಾನರುಗಳು ಹಾಜರು ಇದ್ದಂತೆ ಕಂಡುಬರುವದಿಲ್ಲ. ಮತ್ತು ಇವರುಗಳ ಕೆಲಸವೇನು ?

(ಸೈಂಡ್) ಜಹಗೀರ್‌ದಾರ್ ಮಾದಪ್ಪ.